INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -3, May--June, 2024,
PageNo,01- 11
Peer -Reviewed, Refereed Journal

# ನಾಗಮಂಗಲ ತಾಲೂಕು ಪ್ರದೇಶದ ಶಾಸನಗಳ ಹಿನ್ನೆಲೆಯಲ್ಲಿ ಜೈನ ಬಸದಿಗಳ ಕಲೆ ಮತ್ತು ವಾಸ್ತುಶಿಲ್ಪಗಳು – ಒಂದು ಸಮೀಕ್ಷಾಧ್ಯಯನ

ಡಾ.ಜಯಣ್ಣ.ಬಿ.ಆರ್.[1]

**ಸಾ**ಂಸ್ಕೃತಿಕವಾಗಿ ಶ್ರೀಮಂತರಾಗಿರುವ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕು ಪ್ರದೇಶದ ಜೈನ ಬಸದಿಗಳ ಕುರಿತ ಸಮೀಕ್ಷಾ ಅಧ್ಯಯನವು ಸಮಕಾಲೀನ ಸಂದರ್ಭದಲ್ಲಿ ಮಹತ್ವದಿಂದಲೇ ಕೂಡಿರುತ್ತದೆ. ಏಕೆಂದರೆ, ಇದೇ ನಾಗಮಂಗಲ ತಾಲ್ಲೂಕು ಪ್ರದೇಶವನ್ನು ಕಾಲಾನುಕ್ರಮದಲ್ಲಿ ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಮತ್ತು ಇತರ ಅನೇಕ ಸಾಮಂತರು ಆಳಿರುವುದು ಕೂಡ ಕಂಡುಬರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ನಿರ್ಮಾಣವಾಗಿರುವ ಬಸದಿಗಳು ಹಲವು ಹತ್ತು ಶ್ರೇಷ್ಠತೆಯ ವಾಸ್ತುಶಿಲ್ಪ ಕಲೆಯನ್ನು ಹೊಂದಿರುವುದನ್ನು ಈ ಮುಂದಿನಂತೆ ದಾಖಲೀಕರಿಸಲಾಗಿದೆ.

ಜೈನಧರ್ಮವು ನಾಗಮಂಗಲ ತಾಲ್ಲೂಕು ಪ್ರದೇಶದಲ್ಲಿ ಎಷ್ಟು ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತು ಎಂದರೆ; ಈ ಪ್ರದೇಶವನ್ನು ಆಳಿರುವಂತಹ ಹೊಯ್ಸಳರ ಕಾಲಘಟ್ಟದಲ್ಲಿ ಅನೇಕ ಬಸದಿಗಳು ನಿರ್ಮಾಣಗೊಂಡಿರುವುದು ಇದಕ್ಕೆ ಪ್ರಧಾನ ಕಾರಣವಾಗಿರುತ್ತದೆ. ಇದರ ಜೊತೆಗೆಯೇ ಇಂದಿಗೂ ಅನೇಕ ಬಸದಿಗಳು ಉಳಿದುಕೊಂಡು ಬಂದಿವೆ. ಜೈನರ ಕಾಶಿ ಎಂದೇ ಖ್ಯಾತವಾದ ಶ್ರವಣಬೆಳಗೊಳದ ಹತ್ತಿರದಲ್ಲೇ ಇರುವ ನಾಗಮಂಗಲ ತಾಲೂಕು ಪ್ರದೇಶ ಸಹಜವಾಗಿಯೇ ಇದೇ ಜೈನರ ಪ್ರಮುಖ ಕೇಂದ್ರವಾಗಿರುತ್ತದೆ. ಆ ಬಗೆಯಲ್ಲಿನ ಜೈನರ ದೇವಾಲಯಗಳಿಗೆ ಬಸದಿಗಳೂ ಎಂದು ಸಹ ಕರೆಯಲಾಗುತ್ತದೆ.

ಜೈನ ಧರ್ಮದ ಸಂಬಂಧಿತವಾಗಿ ಬರುವಂತಹ ಜೈನ ಯತಿಗಳು ಮಳೆಗಾಲದ ನಾಲ್ಕು ತಿಂಗಳನ್ನು ಹೊರತುಪಡಿಸಿ, ಇನ್ನುಳಿದ ಕಾಲಮಾನದಲ್ಲಿ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾ ಮುಖದಂತಹ ಕಡೆಗಳಲ್ಲಿ ಹೆಚ್ಚು ಸಂಚಾರ ನಡೆಸುತ್ತಾ ಇರಬೇಕಾಗುತ್ತದೆ. ಕಾಲಕ್ರಮೇಣ ಜೈನ ಯತಿಗಳ ಈ ಪದ್ಧತಿಯೂ ಕಡಿಮೆಯಾಗಿರುತ್ತದೆ. ಆ ಕಾರಣವಾಗಿಯೇ ಈ ಜೈನ ಯತಿಗಳು

[1].ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಸ.ಮ.ಪ್ರ.ದ,ಕಾಲೇಜು,ಚಾಮರಾಜನಗರ.

ಒಂದೇ ಕಡೆ ನೆಲೆ ನಿಲ್ಲಲು ಆರಂಭಿಸಿದರು. ಇದರ ಜೊತೆಗೆಯೇ ಬೌದ್ಧರು, ವೈದಿಕರು ತಮ್ಮ ದೈವಾರಾಧನೆಗಾಗಿ ಧರ್ಮಪ್ರಚಾರಕ್ಕಾಗಿ, ಬೌದ್ಧ ವಿಹಾರಗಳನ್ನು, ಸ್ತೂಪಗಳನ್ನು, ದೇವಾಲಯಗಳನ್ನು ಕಟ್ಟಲು ಆರಂಭಿಸಿದರು. ಇದರ ಪ್ರಭಾವ ಕೂಡ ಜೈನರ ಮೇಲೆ ಅಪಾರವಾಗಿಯಾಯಿತು. ಈ ಎಲ್ಲಾ ನೆಲೆ ಮತ್ತು ಹಿನ್ನೆಲೆಗಳಿಂದ ಅವರು ಬಸದಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದರು ಎಂಬುದು ಕಂಡುಬರುತ್ತದೆ. ಜೈನರು ಪ್ರತ್ಯೇಕವಾದ ವಾಸ್ತುಶಿಲ್ಪವನ್ನು ಅಳವಡಿಸಿಕೊಳ್ಳಲಿಲ್ಲ. ಆದರೆ, ಬದಲಾಗಿ ಆಯಾ ಪ್ರದೇಶದಲ್ಲಿ ಯಾವ ಯಾವ ಮಾದರಿಯಲ್ಲಿನ ವಾಸ್ತುಶಿಲ್ಪ ಶೈಲಿಯನ್ನು ಬಳಕೆಯಲ್ಲಿತ್ತೋ ಅದನ್ನೇ ಪ್ರಧಾನವಾಗಿ ಬಳಸಿಕೊಂಡು ಬಸದಿಗಳ ನಿರ್ಮಾಣ ಮಾಡಿರುತ್ತಾರೆ. ಈ ಬಸದಿಗಳನ್ನು ಚೈತ್ಯಾಲಯ ಮತ್ತು ಜಿನಾಲಯ ಎಂದು ಸಹ ಕರೆಯಲಾಗುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ಮಾಡಿದಾಗ; ದೇವರಹಳ್ಳಿ ಗ್ರಾಮದಲ್ಲಿ ದೊರಕಿರುವ ತಾಮ್ರ ಶಾಸನದಲ್ಲಿ ಗಂಗರ ಅರಸ ಶ್ರೀಪುರುಷನ ಕಾಲದಲ್ಲಿ ನಿರ್ಮಾಣಗೊಂಡ ಜೈನಬಸದಿಯ ಬಗೆಗೆ ಉಲ್ಲೇಖವಿದೆ. ಇದು ಪೃಥ್ವಿ ನೀರ್ಗುಂದ ರಾಜನಾದ ಪರಮಗೊಳನ ಪತ್ನಿಯಾದ ಕುಂದಾಚ್ಚಿಯು ಶ್ರೀಪುರದಲ್ಲಿ ಲೋಕತಿಲಕ ಎಂಬ ಜೈನ ಬಸದಿಯನ್ನು ಕಟ್ಟಿಸಿದಳು ಎಂಬುದು ಅದಕ್ಕೆ ಶ್ರೀಪುರುಷನು ನೀರ್ಗುಂದ ವಿಷಯಕ್ಕೆ ಸೇರಿದ ಪೊನ್ನಳ್ಳಿ ಎಂಬ ಗ್ರಾಮವನ್ನು ದಾನವಾಗಿ ನೀಡಿರುವುದು ದಾಖಲೀಕರಗೊಂಡಿರುತ್ತದೆ.

**ಪಂಚಕೂಟ ಬಸದಿ ಕಂಬದಹಳ್ಳಿ** – ಕಂಬದಹಳ್ಳಿ ನಾಗಮಂಗಲ ತಾಲೂಕು ಪ್ರದೇಶದಿಂದ ಸರಿಸುಮಾರು 18 ಕಿ.ಮೀ ದೂರದಲ್ಲಿದೆ. ಇದು ನಾಗಮಂಗಲದಿಂದ ಜೈನ ಬಸದಿಗೆ ಹೆಚ್ಚು ಪ್ರಸಿದ್ಧವಾಗಿರುವ ಹಾಸನ ಜಿಲ್ಲೆಯ ಶ್ರವಣಬೆಳಗೊಳಕ್ಕೆ ಹೋಗುವ ಮುಖ್ಯರಸ್ತೆಯಿಂದ ಒಂದು ಕಿ.ಮೀ. ಒಳಗೆ ನಡೆದು ಹೋದರೆ ಒಂದು ಬೃಹದಾಕಾರವಾದ ಕಂಬ ಕಾಣುತ್ತದೆ. ಇದನ್ನು ಬ್ರಹ್ಮದೇವರ ಕಂಬವೆಂದು ಕರೆಯಲಾಗುತ್ತದೆ. ಈ ಕಂಬದಿಂದಲೇ ಈ ಊರಿಗೆ ಕಂಬದಹಳ್ಳಿ ಎಂಬ ಹೆಸರು ಬಂದಿದೆ. ಈ ಕಂಬದ ಸಮೀಪದಲ್ಲಿ ನಾಗರ, ದ್ರಾವಿಡ, ವೇಸರ, ಶೈಲಿಯ ಸಮ್ಮಿಶ್ರಣದಿಂದ ಕಲ್ಲಿನಿಂದ ಕಟ್ಟಲಾದ ಏಳು ದೇವಾಲಯಗಳಿವೆ. ಈ ದೇವಾಲಯವನ್ನು ಸರಿಸುಮಾರು ಮೂರು ಹಂತಗಳಲ್ಲಿ ನಿರ್ಮಾಣ ಮಾಡಲಾಗಿದೆ. ಇದೇ ಪಂಚಕೂಟ ಜೈನ ಬಸದಿ ಮತ್ತು ಅದರ ಪಕ್ಕದಲ್ಲಿ ಶಾಂತೀಶ್ವರ ಪಾಳು ಬಸದಿ ಸೇರಿ ಒಟ್ಟು ಏಳು ದೇವಾಲಯಗಳು ಒಂದೇ ಅಂಗಳದಲ್ಲಿವೆ. ಪಂಚಕೂಟ ಬಸದಿ ಹೆಸರೇ ಹೇಳುವಂತೆ ಐದು ಗರ್ಭಗುಡಿಗಳಿರುವ ಬಸದಿಯಾಗಿದೆ. ಇದರ ಮುಖ್ಯ ಬಸದಿಯೂ ಮೂಲತಃ ತ್ರಿಕೂಟಾಚಲವಾಗಿದ್ದು, ಅನಂತರದಲ್ಲಿ ಇನ್ನೆರಡು ಬಸದಿಗಳು ನಿರ್ಮಾಣಗೊಂಡಿವೆ. ಈ ಬಸದಿಯ ಅಧಿಷ್ಠಾನವು ಕುದುರೆ ಲಾಳಾಕೃತಿಯಲ್ಲಿದೆ. ಉತ್ತರಾಭಿಮುಖವಾಗಿರುವ ಆದಿನಾಥ ಬಸದಿ ತ್ರಿಕೂಟಾಚಲದ ಮುಖ್ಯ ಬಸದಿಯಾಗಿದೆ. ಅದರ ಪೂರ್ವಕ್ಕೆ ಶಾಂತಿನಾಥ ಬಸದಿ, ಪಶ್ಚಿಮಕ್ಕೆ ನೇಮಿನಾಥ ಬಸದಿಗಳಿವೆ.

ಈ ಮೂರು ಬಸದಿಗಳಿಗೂ ಅದರದೇ ಆದ ಅರ್ಧ ಮಂಟಪಗಳಿದ್ದು, ಅವೆಲ್ಲವೂ ಸರ್ವಸಮವಾದ ಮಹಾಮಂಟಪಕ್ಕೆ ಹೊಂದಿಕೊಂಡಿವೆ. ಆದಿನಾಥ ಬಸದಿಯ ಗ್ರೀವ ಶಿಖರವು ಬ್ರಹ್ಮಛಂದ ಶೈಲಿಯ ಚತುಷ್ಕೋನ ಆಕೃತಿಯಲ್ಲಿ, ಶಾಂತಿನಾಥ ಬಸದಿಯ ಶಿಖರವು ರುದ್ರಛಂದ ಶೈಲಿಯ ವರ್ತುಲಾಕಾರದಲ್ಲಿ, ನೇಮಿನಾಥ ಬಸದಿಯ ಶಿಖರವು ವಿಷ್ಣುಛಂದ ಶೈಲಿಯ ಅಷ್ಟಕೋನಾಕೃತಿಯಲ್ಲಿ ಕಂಗೊಳಿಸುತ್ತವೆ. ಇವು ಹಿಂದೂ ದೇವಾಲಯಗಳ ಶಿಖರಗಳನ್ನು ಹೋಲುತ್ತವೆ. ಸೋಪಾನ ಹಾಗೂ ಮಕರಯಾಳಿಗಳುಳ್ಳ ಸ್ತಂಬಗಳ ತೆರೆದ ಮಹಾಮಂಟಪದ ಎದುರಿಗೆ ತೀರ ಹತ್ತಿರದಲ್ಲಿ ಬಲಿಪೀಠವಿದ್ದು, ಅದರ ಅಷ್ಟಕೋನಾಕೃತಿಯ ಸ್ತರಗಳಲ್ಲಿ ಅಷ್ಟ ದಿಕ್ಪಾಲಕರನ್ನು ಕೆತ್ತಲಾಗಿದೆ. ಬಲಿಪೀಠದ ಎದುರಿಗೆ ಮತ್ತೆ ಅದೇ ಹೆಸರಿನ ನಾಲ್ಕನೆಯ ಬಸದಿ ಶಾಂತಿನಾಥ ಬಸದಿ ಹಾಗೂ ಐದನೆಯ ಬಸದಿ ಆದಿನಾಥ ಬಸದಿಗಳಿವೆ. ಈ ಎರಡೂ ಬಸದಿಗಳಿಗೆ ಎರಡಂತಸ್ತಿನ ಚತುಷ್ಕೋನ ಅಷ್ಟಾಂಗ ನಾಗರ ಶೈಲಿಯ ಶಿಖರಗಳಿದ್ದು ಅವುಗಳಿಗೂ ಅದರದೇ ಆದ ಅರ್ಧ ಹಾಗೂ ಮಹಾಮಂಟಪಗಳಿವೆ. ಈ ಮಹಾಮಂಟಪಗಳೂ ಸಹ ಸರ್ವಸಮವಾಗಿ ಮುಖಮಂಟಪಕ್ಕೆ ಹೊಂದಿಕೊಂಡಿವೆ. ಒಟ್ಟಾರೆ ಈ ದೇವಾಲಯಗಳ ಸಮೂಹಕ್ಕೆ ಪಂಚಕೂಟ ಬಸದಿ ಎಂದು ಕರೆಯುತ್ತಾರೆ. ಈ ಪ್ರಕಾರದ ಉತ್ತರಕ್ಕೆ ದ್ವಿಕೂಟಾಚಲವಾದ ಶಾಂತಿನಾಥ ಬಸದಿಯೂ ಇದೆ. ಮುಖ್ಯ ಆದಿನಾಥನ ಬಸದಿಯಲ್ಲಿ ಗಂಗರ ವಾಸ್ತುಶಿಲ್ಪದ ಪೂರ್ಣ ವಿಕಾಸದೊಂದಿಗೆ ಪಲ್ಲವ ಶೈಲಿಯ ಪ್ರಭಾವ ಕಂಡುಬರುತ್ತದೆ. ಇದು ಗಂಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿರಬೇಕು ಎಂದು ಊಹಿಸಬಹುದು. ಅನಂತರ ಹೊಯ್ಸಳರ ಕಾಲದಲ್ಲಿ ಮತ್ತು ಮುಂದೆ ಅನೇಕ ಬಾರಿ ಜೀರ್ಣೋದ್ಧಾರಗೊಂಡಿದೆ ಮತ್ತು ವಿಸ್ತಾರಗೊಂಡಿರುತ್ತದೆ. ಪಂಚಕೂಟ ಬಸದಿಯ ಆದಿನಾಥನ ಬಸದಿ ತ್ರಿಕೂಟಾಚಲವಾಗಿದ್ದು, ದೇವಾಲಯದ ತಳಭಾಗ ಅಷ್ಟಕೋನಾಕಾರವಾಗಿದೆ. ಗೋಡೆಯ ಮೇಲೆ ಯಕ್ಷ, ಜಿನರ ಲತಾಪಟ್ಟಿಕೆಗಳಿವೆ. ಹೊರಗೋಡೆಗಳ ನಡುವೆ ಆಳವಿಲ್ಲದ ಒಂದೊಂದು ಗೂಡು ಮತ್ತು ಅದರ ಎರಡೂ ಕಡೆಯೂ ಅಲಂಕಾರದ ಅರೆಗಂಬಗಳಿವೆ. ನವರಂಗದ ಕಂಬಗಳು ಅಷ್ಟಕೋನಾಕೃತಿಯಲ್ಲಿದ್ದು ತುದಿಯು ಕಲಶಗಳಂತಿವೆ. ಚಾವಣಿಯ ನಡುವಣ ಅಂಕಣದ ಸುತ್ತಲೂ ಚಾವಣಿಗೆ ಹಾಕಿರುವ ಹಾಸುಗಲ್ಲುಗಳು ಹೊರಭಾಗಕ್ಕೆ ಚಾಚುವಾಗ ಅಗಲವಾಗುತ್ತಾ ಹೋಗಿರುವುದರಿಂದ ಸುತ್ತಲೂ ಕಿರಣಗಳು ಹರಡಿದಂತೆ ತೋರುತ್ತವೆ. ನವರಂಗದ ಒಳಗಡೆ ಪ್ರವೇಶಿಸಿದಾಗ ಎಡಭಾಗದ ಮೊದಲ ಕೂಟದಲ್ಲಿ ಶಾಂತಿನಾಥನ ಪದ್ಮಾಸೀನವಾದ ವಿಗ್ರಹವಿದೆ. ದ್ವಾರದಲ್ಲಿ ಪಾರ್ಶ್ವನಾಥನ ಸುಂದರ ವಿಗ್ರಹವಿದೆ. ಮಧ್ಯದ ಪ್ರಧಾನ ಕೂಟದಲ್ಲಿ ಆದಿನಾಥನ ವಿಗ್ರಹವಿದೆ. ಆದಿನಾಥ ಮೂರ್ತಿಯು ನಿರಾಭರಣವಾಗಿದ್ದು ತಪೋನಿರತವಾಗಿರುವ ಆತನ ಮುಖದಲ್ಲಿ ಶಾಂತತೆ, ತೇಜಸ್ಸು, ಓಜಸ್ಸು ಹೊಮ್ಮುವಂತೆ ಕಡೆದಿರುವ ಶಿಲ್ಪ ಮನಮೋಹಕವಾಗಿದೆ. ಯಕ್ಷ–ಯಕ್ಷಿಯರನ್ನು ಭಾವಯುಕ್ತವಾಗಿ ಸುಂದರವಾಗಿ ಕೆತ್ತಲಾಗಿದೆ. ದ್ವಾರದಲ್ಲಿ ಎರಡು ಪಾರ್ಶ್ವನಾಥನ ವಿಗ್ರಹಗಳಿವೆ. ಬಲಭಾಗದ ಕೂಟದಲ್ಲಿ

ನೇಮಿನಾಥನ ಪದ್ಮಾಸೀನವಾದ ಶಿಲ್ಪವಿದೆ. ಈ ಕೂಟದ ದ್ವಾರದಲ್ಲಿ ನೇಮಿನಾಥನ ಯಕ್ಷ ಸರ್ವಾಣೇಕ್ಷ ಮತ್ತು ಯಕ್ಷಿ ಕುಷ್ಮಾಂಡಿನಿ ದೇವಿಯ ಮೂರ್ತಿಗಳಿವೆ. ನವರಂಗದಲ್ಲಿ ಎಡಗಡೆಯಿಂದ ಪದ್ಮಪೀಠದ ಮೇಲೆ ನಾಲ್ಕು ಬ್ರಹ್ಮದೇವರ ವಿಗ್ರಹಗಳಿವೆ. ನವರಂಗದ ಎಡಭಾಗದ ಮೂಲೆಯಲ್ಲಿ ನರಸಿಂಹನ ಲಾಂಛನದೊಂದಿಗೆ ಮಹಾವೀರನ ವಿಗ್ರಹವಿದೆ. ಮಂದಸ್ಮಿತನಾಗಿ, ಗಂಭೀರ ವದನನಾಗಿ ಮತ್ತು ಧ್ಯಾನಮುದ್ರೆ ಇರುವ ಈ ಮೂರು ಅಭಿವ್ಯಕ್ತಿಗಳು ಒಂದೇ ವಿಗ್ರಹದಲ್ಲಿ ಬೆಳಕಿನ ವ್ಯತ್ಯಾಸದಿಂದ ಮೂಡುವಂತೆ ಕೆತ್ತಿರುವ ಶಿಲ್ಪಿಯ ಸೃಜನಶೀಲತೆ ಅದ್ಭುತವಾಗಿದೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಮತ್ತು ಮಧ್ಯದಲ್ಲಿ ಧರಣೇಂದ್ರ ಪದ್ಮಾವತಿಯ ಕೆತ್ತನೆಗಳಿವೆ. ದೇವಾಲಯವನ್ನು ಮುಖಮಂಟಪದ ಮೂಲಕ ಪ್ರವೇಶಿಸಿದ ಅನಂತರ ಅಕ್ಕ–ಪಕ್ಕದಲ್ಲಿ ಎರಡು ಗರ್ಭಗುಡಿಗಳಲ್ಲಿ ಶಾಂತಿನಾಥನ ವಿಗ್ರಹವಿದೆ.

ಪಂಚಕೂಟ ಬಸದಿಯ ವಾಸ್ತುಶಿಲ್ಪ ಶೈಲಿಯನ್ನು ಬಹುಸೂಕ್ಷ್ಮವಾಗಿಯೇ ಗಮನಿಸಿದಾಗ; ಸಾಮಾನ್ಯವಾಗಿ ಗಂಗರ ಕಾಲದ ರಚನೆಗಳಲ್ಲಿ ಬಾಗಿಲ ಎತ್ತರ ಕಡಿಮೆ ಇದ್ದು, ಗಂಟಾಕೃತಿಯ ಕಂಬಗಳನ್ನು ಕಡೆದು ನಿಲ್ಲಿಸಿದ್ದು, ಅವು ಕುಂಭದ ರೀತಿಯ ರಚನೆಯನ್ನು ಹೊಂದಿರುತ್ತವೆ. ಈ ಎಲ್ಲಾ ಲಕ್ಷಣಗಳು ಪಂಚಕೂಟ ಬಸದಿಯಲ್ಲಿರುವುದನ್ನು ನಾವು ಕಾಣುತ್ತೇವೆ.

**ಶಾಂತೀಶ್ವರ ಪಾಳು ಬಸದಿಯು** ಪಂಚಕೂಟ ಬಸದಿಯ ಆವರಣದಲ್ಲಿಯೇ ಸರಿಸುಮಾರು 20 ಅಡಿ ದೂರದಲ್ಲಿ ಶಾಂತಿನಾಥ ಬಸದಿಯಿದೆ. ಈ ಬಸದಿಯು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುತ್ತದೆ. ಇದು ದ್ರೋಹಘರಟ್ಟದಲ್ಲಿ ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನ ಮಗ ಬೊಪ್ಪಾದೇವನು ದ್ರೋಹಘರಟ್ಟಾಚ್ಚಾರಿಯ ಕೈಯಲ್ಲಿ ಹೊಸದೊಂದು ಶಾಂತೀಶ್ವರ ಬಸದಿಯನ್ನು ಕಟ್ಟಿಸದನೆಂದು ಶಾಂತೀಶ್ವರ ಬಸದಿಯ ಉತ್ತರ ಬಾಗಿಲ ಕಡೆ ನಿಂತಿರುವ ಸರಿಸುಮಾರು ಕ್ರಿ.ಶ 12ನೆಯ ಶತಮಾನದ ಶಾಸನವೊಂದರಲ್ಲಿ ಉಲ್ಲೇಖಿತಗೊಂಡಿರುತ್ತದೆ. ಅಂದರೆ, ಇದು ಶಾಂತಿನಾಥ ಬಸದಿಯು ವಿಷ್ಣುವರ್ಧನನ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿದೆ. ಇದಕ್ಕೆ ಪೂರಕವಾಗಿ ಶಾಂತೀಶ್ವರ ಬಿಂಬದ ಮುಂದಣ ತೊಲೆಯ ಮೇಲಿರುವ ಶಾಸನದಲ್ಲಿ ಹೊಯ್ಸಳರ ಅರಸ ವಿಷ್ಣುವರ್ಧನನು ಕಂಬದಹಳ್ಳಿಯ ಶಾಂತೀಶ್ವರನ ಪೂಜಾ ಕೈಂಕಾರ್ಯಕ್ಕೆ, ಆಹಾರದಾನಕ್ಕೆ ಎಂದು ನೀಡಿದ್ದ ದಾನ ಸಾಕಾಗದ ಕಾರಣಕ್ಕೆ ಮಹಾಮಂಡಳೇಶ್ವರ, ಜಗದೇಕಮಲ್ಲ, ತಲಕಾಡುಗೊಂಡ ಎಂಬ ಬಿರುದುಗಳನ್ನು ಹೊಂದಿದ್ದ ನರಸಿಂಹನು ಮೊದಲಿಯಹಳ್ಳಿಯನ್ನು ಶಾಂತಿನಾಥದೇವರ ಪೂಜೆಗೆ ಆಹಾರದಾನಕ್ಕೆ ಎಂದು ಮರಿಯಾನೆ ದಂಡನಾಯಕ ಮತ್ತು ಭರತಿಮಯ್ಯ ದಂಡನಾಯಕನಿಗೆ ಉದಕ ತರ್ಪಣ ಕೊಡುವ ಮೂಲಕ ದಾನ ನೀಡಿದ್ದನು. ಈ ಶಾಸನದಿಂದ ಶಾಂತೀಶ್ವರ ಬಸದಿಯ ಪೂಜಾ ಕೈಂಕಾರ್ಯಗಳಿಗೆ ವಿಷ್ಣುವರ್ಧನನು ಮೊದಲಿಗೆ ದಾನವನ್ನು ನೀಡಿದ್ದನು. ಅದು ಸಾಲದಾದಾಗ ಅವನ ಮಗ ನರಸಿಂಹನು ಮತ್ತೆ ದಾನ

ನೀಡಿದ ವಿಷಯವು ಮತ್ತು ಇದರಿಂದ ವಿಷ್ಣುವರ್ಧನನ ಕಾಲದಲ್ಲೇ ಈ ಬಸದಿ ನಿರ್ಮಾಣಗೊಂಡಿತ್ತು ಎಂಬುದು ಕೂಡ ತಿಳಿದುಬರುತ್ತದೆ.

ಶಾಂತೀಶ್ವರ ಬಸದಿಯು ಹೊಯ್ಸಳರ ಕಾಲದಲ್ಲಿ ಸಾಕಷ್ಟು ಮನ್ನಣೆ ಗಳಿಸಿತ್ತು ಮತ್ತು ಆಗಿಂದಾಗ್ಗೆ ದತ್ತಿಗಳನ್ನು ಪಡೆಯುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಎರಡನೆಯ ಬಲ್ಲಾಳನ ಕಾಲದಲ್ಲಿ ಹಾಕಿಸಿರುವ ಶಾಸನ ಮಾಹಿತಿಯನ್ನು ನೀಡುತ್ತದೆ. ಬಸದಿಯ ಗರ್ಭಗುಡಿಯ ಮುಂದಿನ ತೊಲೆಯ ಮೇಲಿರುವ ಈ ಶಾಸನವು ಎರಡನೆಯ ಬಲ್ಲಾಳನ ಸಾಮಂತನಾದ ಭರತೆಯ ನಾಯಕನು ಹಿರಿಯಕೆರೆಯ ಉತ್ತರ ದಿಕ್ಕಿನ ತೂಬಿನ ಮೊದಲ ಏರಿಯಲ್ಲಿರುವ ಖಂಡುಗ ಗದ್ದೆಯನ್ನು ಶಾಂತಿನಾಥ ದೇವರ ಪೂಜೆಗಾಗಿ ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತದೆ. ಹೀಗೆ ಹೊಯ್ಸಳ ಅರಸರಿಂದ ಮನ್ನಣೆ ಪಡೆದ ಶಾಂತೀಶ್ವರ ಬಸದಿಯು ಹೊರ ವಲಯದ ಗೋಡೆಗಳ ಮೇಲಿರುವ ಆನೆ, ಕುದುರೆ, ಸಿಂಹ ಮತ್ತು ಯಾಳಿಗಳ ಚಿತ್ರಪಟ್ಟಿಕೆಗಳು ಅಮೋಘ ಕೆತ್ತನೆಯಾಗಿವೆ. ಇವು ಇತರ ಹೊಯ್ಸಳರ ದೇವಾಲಯಗಳಲ್ಲಿರುವ ಕೆತ್ತನೆಗಳನ್ನು ಹೋಲುತ್ತದೆ. ಅಲ್ಲದೇ ಆನೆ, ಕುದುರೆ, ಆನೆ–ಸಿಂಹಗಳ ನಡುವಣ ಹೋರಾಟ ಯಾವುದೋ ಯುದ್ಧದ ಚಿತ್ರಣದಂತಿದೆ.

ಇದೇ ಶಾಂತಿನಾಥ ಬಸದಿಯು ಗರ್ಭಗೃಹವೊಂದನ್ನು ಹೊಂದಿದ್ದು, ಉಳಿದವು ಒಂದು ದೊಡ್ಡ ಕಲ್ಲಿನ ಮಂಟಪದೊಳಗಿವೆ. ಇದಕ್ಕೆ ರಕ್ಷಣಾ ಗೋಡೆಗಳಿಲ್ಲ, ಇದೊಂದು ಬಯಲು ದೇವಾಲಯ. ಗರ್ಭಗುಡಿಯಲ್ಲಿನ ಶಾಂತಿನಾಥ ವಿಗ್ರಹ 10 ಅಡಿ ಎತ್ತರವಿದ್ದು, ಕಂಬದಹಳ್ಳಿಯ ಬಹು ಸುಂದರ ಶಿಲ್ಪಕೃತಿಗಳಲ್ಲೊಂದಾಗಿದೆ. ಈ ಗುಡಿಯ ಮುಂದೆ ವಿಶಾಲವಾದ ನವರಂಗವಿದ್ದು, ಸುಂದರವಾದ ಕೆತ್ತನೆಯ ನಾಲ್ಕು ಕಂಬಗಳಿವೆ. ಶಾಂತಿನಾಥ ಬಸದಿಯ ಪೂರ್ವದಲ್ಲಿ ಮತ್ತೊಂದು ಬಸದಿ ಇದ್ದು, ಇದರ ಭುವನೇಶ್ವರಿ ತುಂಬಾ ಆಕರ್ಷಕವಾಗಿದೆ. ಈ ನವರಂಗದ ಬಾಗಿಲ ಬಳಿ ಶಿವನ ಒಂದು ವಿಗ್ರಹವಿದೆ. ಈ ವಿಗ್ರಹ ಇಲ್ಲಿ ಬರಲು ಕಾರಣವೇನು? ಎಂದು ತಿಳಿಯಬೇಕಾದರೆ ಈ ಬಸದಿಯ ರಂಗಮಂಟಪದ ಈಶಾನ್ಯ ಕಂಬದ ಬೋದಿಗೆ ಪಟ್ಟಿಯ ಮೇಲಿರುವ ಶಾಸನವನ್ನು ಅವಲೋಕಿಸಬೇಕು. ಇದು 13ನೆಯ ಶತಮಾನಕ್ಕೆ ಸೇರಿದ್ದು, ಜೈನರ ಮೇಲೆ ಆ ಕಾಲಕ್ಕೆ ಶೈವ ಧರ್ಮದ ಪ್ರಭಾವ ಯಾವ ರೀತಿಯಲ್ಲಾಗುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಒಟ್ಟಾರೆಯಾಗಿ ಸರಿಸುಮಾರು ಕ್ರಿ.ಶ 10ನೆಯ ಶತಮಾನದಿಂದ ವಿರಾಜಮಾನವಾಗಿದ್ದ ಜೈನಧರ್ಮಕ್ಕೆ 13ನೆಯ ಶತಮಾನದ ಹೊತ್ತಿಗೆ ಪ್ರಬಲ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡವು ಎಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ.

ಕಂಬದಹಳ್ಳಿಯ ಮತ್ತೊಂದು ವಿಶೇಷತೆಯೆಂದರೆ ಪಂಚಕೂಟ ಬಸದಿಯ ಉತ್ತರದಲ್ಲಿರುವ 50 ಅಡಿ ಎತ್ತರದ ಕರಿಕಲ್ಲಿನ ಬ್ರಹ್ಮದೇವರ ಕಂಬ. ಈ ಕಂಬದ ತಳಭಾಗದ ಎಂಟು ಮುಖಗಳ 142 ಮೇಲೂ ಅಷ್ಟದಿಕ್ಪಾಲಕರ ಶಿಲ್ಪಗಳಿದ್ದು, ಕಂಬದ ಮೇಲೆ ಪೂರ್ವಾಭಿಮುಖವಾಗಿ ಬ್ರಹ್ಮದೇವರ ಶಿಲ್ಪವಿದೆ.

ಬ್ರಹ್ಮದೇವರ ಕಂಬದ ಬುಡದಲ್ಲಿರುವ ಸರಿಸುಮಾರು ಕ್ರಿ.ಶ. 1118ರ ಕಾಲದ ಶಾಸನವೊಂದು ಹೊಯ್ಸಳರ ಮಹಾಪ್ರಧಾನಿ ದ್ರೋಹಘರಟ್ಟದ ಹಿರಿಯ ದಂಡನಾಯಕ ಗಂಗರಾಜನು ತಲಕಾಡನ್ನು ಗೆದ್ದಾಗ, ಹೊಯ್ಸಳರ ರಾಜ ವಿಷ್ಣುವರ್ಧನನು ಏನಾದರೂ ಕೋರಿಕೊಳ್ಳಲು ಕೇಳುತ್ತಾನೆ. ಆಗ ಆತ ತೀರ್ಥ ಕ್ಷೇತ್ರವಾದ ಬಿಂಡಿಗನವಿಲೆಗೆ ದತ್ತಿಯನ್ನು ಕೇಳಿ, ಅದನ್ನು ಶುಭಚಂದ್ರ ಸಿದ್ಧಾಂತ ದೇವರಿಗೆ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ.

ಬಿಂಡಿಗನವಿಲೆ ಪ್ರಸಿದ್ಧ ಜೈನಕ್ಷೇತ್ರವಾಗಿತ್ತು ಮತ್ತು ಅಲ್ಲಿ ಬಸದಿಯಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಪಂಚಕೂಟಬಸದಿಯ ರಂಗಮಂಟಪದ ತೊಲೆಯ ಮೇಲೆ ಶಾಸನವೊಂದಿದೆ. ಅದು ಗಂಗವಂಶದ ಮಂತ್ರಿಯಾಗಿದ್ದ ನೇಮದಂಡೇಶ ಮತ್ತು ಮುದ್ದರಸಿಯ ಮಗನಾದ ಕಲಿಯುಗದ ಭೀಮ ಎಂದು ಖ್ಯಾತನಾದ ಪಾರ್ಶ್ವದೇವನು ಬಿಂಡಿಗನವಿಲೆಯ ಪಾರ್ಶ್ವನಾಥ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಸುಣ್ಣ–ಬಣ್ಣ ಹೊಡೆಸಿ ಮತ್ತು 24 ಖಂಡುಗ ನೀರಾವರಿ ಭೂಮಿಯನ್ನು, 50 ಖಂಡುಗ ಬೆದ್ದಲೆ ಭೂಮಿಯನ್ನು ಜೈನಮುನಿಗಳು ಮತ್ತು ವಿದ್ಯಾರ್ಥಿಗಳಿಗಾಗಿ ದತ್ತಿ ಬಿಟ್ಟನೆಂಬ ಅಂಶವನ್ನು ದಾಖಲಿಸುತ್ತದೆ. ಈ ಶಾಸನಗಳಿಂದ ತಿಳಿದುಬರುವ ಪ್ರಧಾನ ವಿಷಯವೇನೆಂದರೆ; ಬಿಂಡಿಗನವಿಲೆಯು ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಇಲ್ಲಿ ಪಾರ್ಶ್ವನಾಥ ಬಸದಿ ಇತ್ತು. ಅದಕ್ಕಾಗಿ ಹೊಯ್ಸಳರ ಅರಸರು, ಅಧಿಕಾರಿಗಳು ದಾನ ದತ್ತಿಗಳನ್ನು ನೀಡಿದ್ದರು. ಆದರೆ, ಪ್ರಸ್ತುತ ಬಿಂಡಿಗನವಿಲೆಯಲ್ಲಿ ಈ ಬಸದಿಗಳು ಕಂಡುಬಂದಿಲ್ಲ. ಕಾಲದ ಹೊಡೆತಕ್ಕೆ ಅಥವಾ ಅನ್ಯಧರ್ಮದ ಹೊಡೆತಕ್ಕೆ ಸಿಕ್ಕಿ ಅವು ನಾಶವಾಗಿರಲೂಬಹುದು. ಈ ಶಾಸನದಿಂದ ತಿಳಿದುಬರುವ ಮತ್ತೊಂದು ವಿಶೇಷತೆಯೆಂದರೆ; ಪಾರ್ಶ್ವದೇವನು ನೀಡಿರುವ ದತ್ತಿ ಜೈನಮುನಿಗಳ ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ಎಂದಿದೆ. ಅಂದರೆ ಆಗ ಜೈನ ಬಸದಿಗಳು ಕೇವಲ ಧಾರ್ಮಿಕ ಕೇಂದ್ರ ಮಾತ್ರವಾಗಿರದೆ, ವಿದ್ಯಾಕೇಂದ್ರವಾಗಿದ್ದವು. ರಾಜರು, ಅಧಿಕಾರಿಗಳು ಕೇವಲ ಧಾರ್ಮಿಕ ಕಾರ್ಯಗಳಿಗಲ್ಲದೇ ವಿದ್ಯಾರ್ಜನೆಗಾಗಿ ಕೂಡ ದಾನ ದತ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಕಂಬದಹಳ್ಳಿಯ ದಕ್ಷಿಣಕ್ಕಿರುವ ಬೋಳರೆ ಗುಡ್ಡದಲ್ಲಿ ಒಂದು ಬಸದಿ ಇರುವುದುನ್ನು ಸ್ಥಳೀಯರು ಹೇಳುತ್ತಾರೆ. ಅದರ ಕುರುಹಾಗಿ ಚಂದ್ರಪ್ರಭಾಸ್ವಾಮಿಯ ದೊಡ್ಡದೊಂದು ಜಿನಬಿಂಬ ಅಲ್ಲಿದೆ. ಹಲಯ್ಯ, ಬೀರಯ್ಯ ಎಂಬುವವರು ಈ ಜಿನಬಿಂಬವನ್ನು ಕೆತ್ತಿಸಿ, ಇಲ್ಲಿ ಬಸದಿಯನ್ನು ಕಟ್ಟಿಸಿದ್ದರೆಂದು ಊಹೆ ಮಾಡಬಹುದಾಗಿದೆ. ಈ ಎಲ್ಲಾ ಸ್ಮಾರಕಗಳು, ಶಾಸನಗಳನ್ನು ಗಮನಿಸಿದಾಗ ಕಂಬದಹಳ್ಳಿಯು ಅಂದಿನ ಕಾಲಕ್ಕೆ ಪ್ರಮುಖ ಜೈನ ಕೇಂದ್ರವಾಗಿತ್ತು ಎಂಬುದನ್ನು ಸಾಕ್ಷೀಕರಿಸಬಹುದು.

**ಯಲ್ಲಾದಹಳ್ಳಿಯ ಪಾರ್ಶ್ವಜಿನ ತ್ರಿಕೂಟ ಬಸದಿಯು** ಬೆಳ್ಳೂರು–ನಾಗಮಂಗಲ ರಸ್ತೆಯಲ್ಲಿ ಚೋಳಸಂದ್ರದ ಬಳಿ ಎಡಭಾಗಕ್ಕೆ ಯಲ್ಲಾದಹಳ್ಳಿ ವ್ಯಾಪ್ತಿಗೆ ಬರುವ ಎತ್ತರದ ಬಂಡೆಯ ಮೇಲೆ

ಶಿಥಿಲಾವಸ್ಥೆಯಲ್ಲಿರುವುದು ಕಂಡುಬರುತ್ತದೆ. ಈ ಪಾಳು ಬಸದಿಯ ಬಳಿಯಿರುವ ಶಾಸನವು ಜಿನಾಲಯದ ನಿರ್ಮಾಣದ ಬಗೆಗೆ ತಿಳಿಸುತ್ತದೆ. ವಿಷ್ಣುವರ್ಧನನ ಮಹಾಪ್ರಧಾನ ಕೌಶಿಕ ಗೋತ್ರದ ತಂತ್ರವೆಗ್ಗಡೆ ಎಂಬ ಅಧಿಕಾರಿಯಾದ ದೇವರಾಜನಿಗೆ ರಾಜನು ಆತನ ಧರ್ಮಬುದ್ಧಿಯನ್ನು ಕಂಡು ಗೌರವದಿಂದ ಸೂರನಹಳ್ಳಿ ಎಂಬ ಗ್ರಾಮವನ್ನು ನೀಡಿದನು. ಆಗ ದೇವರಾಜನು ಸೂರನಹಳ್ಳಿಯಲ್ಲಿ ರಾಜ, ರಾಷ್ಟ್ರ, ಯಶೋಧನ ವೃದ್ಧಿಗಾಗಿ ಎಂದು ಪಾರ್ಶ್ವಜಿನ ತ್ರಿಕೂಟ ಬಸದಿಯನ್ನು ಕಟ್ಟಿಸಿ, ದೇವರ ಅಷ್ಟವಿಧಾರ್ಚನೆಗೆ ಮತ್ತು ಆಹಾರದಾನಕ್ಕೆ ಎಂದು, ತಾನು ರಾಜನಿಂದ ಪಡೆದ 40 ವಾರ್ಷಿಕ ಹೊನ್ನಿನ ಆದಾಯವಿದ್ದ ಸೂರನಹಳ್ಳಿಯಲ್ಲಿ ಮೊದಲ 10 ಹೊನ್ನಿನ ಹುಟ್ಟುವಳಿ ಭೂಮಿಯನ್ನು ಪಾರ್ಶ್ವಪುರ ಎಂದು ಹೆಸರಿಟ್ಟು ಅದನ್ನು ಮುನಿಚಂದ್ರ ಎಂಬ ಜೈನಮುನಿಗೆ ದತ್ತಿಯಾಗಿ ನೀಡಿರುವುದು ಉಲ್ಲೇಖಿತವಾಗಿರುತ್ತದೆ.

ಇದೊಂದು ತ್ರಿಕೂಟ ಬಸದಿಯಾಗಿದ್ದು, ಬಳಪದ ಕಲ್ಲನ್ನು ತುಂಬಾ ನಯಗೊಳಿಸಿ ನಿರ್ಮಿಸಿದ್ದಾರೆ. ಅಧಿಷ್ಠಾನವು ತುಂಬಾ ವಿಶಿಷ್ಟವಾಗಿದೆ. ಇದರಲ್ಲಿ ನವರಂಗವಿಲ್ಲ. ಈಗ ಜಿನಾಲಯದ ಗರ್ಭಗೃಹ ಅಂತರಾಳ ಭಾಗಗಳಷ್ಟೇ ಉಳಿದುಕೊಂಡಿವೆ. ಗರ್ಭಗೃಹಗಳ ಬಾಗಿಲವಾಡಗಳು ರೇಖಾಲಂಕಾರಗಳಿಂದ ಕೂಡಿದ್ದು, ಲಲಾಟದಲ್ಲಿ ತೀರ್ಥಂಕರನ ಕೆತ್ತನೆಯಿದೆ. ಭಿತ್ತಿಯಲ್ಲಿ(ಗೋಡೆ) ಕಿರುದೇವಕೋಷ್ಠ ಹಾಗೂ ಅಲಂಕಾರಿಕ ಕಂಬಗಳಿವೆ. ಸರಿಯಾದ ರಕ್ಷಣೆಯಿಲ್ಲದೆ ಈ ತ್ರಿಕೂಟ ಜಿನಾಲಯವು ಕಾಲಗರ್ಭದಲ್ಲಿ ಜೀರ್ಣಗೊಳ್ಳುತ್ತಾ ಹೋಗುತ್ತಿದೆ.

**ಬೆಳ್ಳೂರು ಗ್ರಾಮದಲ್ಲಿರುವ ಈ ವಿಮಲನಾಥ ಬಸದಿಯು** ನಾಗಮಂಗಲದಿಂದ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿರುವ ಇದೆ ಬೆಳ್ಳೂರು ಹೋಬಳಿಗೆ ಸೇರಿದೆ. ಇಲ್ಲಿರುವ ವಿಮಲನಾಥ ಬಸದಿಯನ್ನು ಸರಿಸುಮಾರು ಕ್ರಿ.ಶ 17ನೆಯ ಶತಮಾನದಲ್ಲಿ ಕಟ್ಟಲಾಗಿದೆ. ಹುಲಿಕಲ್ಲಿನ ಪದುಮಣ್ಣ ಸೆಟ್ಟರ ಮೊಮ್ಮಗ, ದೊಡ್ಡದಣ್ಣ ಸೆಟ್ಟರ ಮಗ, ಪದ್ಮಕುಲದ ವರ್ತಕನಾದ, ಲಕ್ಷ್ಮಿಸೇನಾಚಾರ್ಯರ ಶಿಷ್ಯನಾದ ಶರ್ಕರ(ಸಕ್ಕರೆ)ಸೆಟ್ಟಿ ಎಂಬುವವನು ವಿಮಲನಾಥ ಬಸದಿಯನ್ನು ಕಟ್ಟಿಸಿದನೆಂದು, ವಿಮಲನಾಥ ಬಸದಿಯ ಪೀಠದ ಮೇಲಿರುವ ಶಾಸನವು ತಿಳಿಸುತ್ತದೆ. ಎರಡೂವರೆ ಅಡಿ ಎತ್ತರದ ವಿಮಲನಾಥ ಮೂರ್ತಿ ಗರ್ಭಗುಡಿಯಲ್ಲಿದ್ದು, ಈ ಮೂರ್ತಿಯನ್ನು ಸಮಂತಭದ್ರಾಚಾರ್ಯರ ಶಿಷ್ಯ ಲಕ್ಷ್ಮಿಸೇನಾಚಾರ್ಯ ಎಂಬುವವನು ಪ್ರತಿಷ್ಠಾಪಿಸಿದನೆಂದು ಮೂರ್ತಿಯ ಮೇಲಿರುವ ಶಾಸನವು ಉಲ್ಲೇಖಿಸುತ್ತದೆ. ಅಲ್ಲೇ ಇರುವ ಮತ್ತೊಂದು ಶಾನಸವು ಸಕ್ಕರೆ ಸೆಟ್ಟಿಯು ವಿಮಲನಾಥ ಚೈತ್ಯಾಲಯವನ್ನು ಡಿಳ್ಳಿ ಕೊಲ್ಲಾಪುರ, ಜಿನ ಕಂಚಿ, ಪೆನುಗೊಂಡೆ ಸಿಂಹಾಸನಾಧೀಶರಾದ ಲಕ್ಷ್ಮೀಸೇನ ಭಟ್ಟಾರಕರ ಸಲಹೆಯಂತೆ ನಿರ್ಮಿಸಲಾಗಿದೆಯೆಂದು ಮತ್ತು ಈ ಚೈತ್ಯಾಲಯ ನಿರ್ಮಿಸಲು ಮೈಸೂರಿನ ಅರಸರಾದ ದೇವರಾಜ ಒಡೆಯರು ಭೂಮಿ ನೀಡಿದ ಮಾಹಿತಿಯನ್ನು ನೀಡುತ್ತದೆ. ಈ ಬಸದಿಯು ದ್ರಾವಿಡ ಶೈಲಿಯಲ್ಲಿ

ರಚಿತಗೊಂಡಿದ್ದು ವಿಶೇಷವಾದ ಕೆತ್ತನೆಗಳು ಅಷ್ಟಾಗಿ ಕಂಡುಬಂದಿಲ್ಲ. ಪಾಳುಬಿದ್ದಿದ್ದ ಇದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ.

**ಬೋಗಾದಿಯಲ್ಲಿರುವ ಶ್ರೀಕರಣ ಪಾರ್ಶ್ವನಾಥ ಜಿನಾಲಯವು** ಹೊಯ್ಸಳರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದನ್ನು ಪ್ರಾಚೀನ ಶಾಸನಗಳಲ್ಲಿ ಬೋಗಾದಿ, ಬೋಗವದಿ, ಬೋಗವತಿ ಎನ್ನುವ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಒಂದನೆಯ ನರಸಿಂಹನ ಕಾಲದಲ್ಲಿ ಶ್ರೀಕರಣದ ಮಾದಿರಾಜನು ಬೋಗವತಿ(ಬೋಗಾದಿ) ಎಂಬ ಹಳ್ಳಿಯಲ್ಲಿ ಶ್ರೀಕರಣದ ಜಿನಾಲಯವನ್ನು ಕಟ್ಟಿಸಿ, ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯನ್ನು ಪ್ರತಿಷ್ಠಾಪಿಸಿದನು. ಆವಾಗ ಅರಸನು ಬೋಗವತಿ ಗ್ರಾಮವನ್ನು ದತ್ತಿಯಾಗಿ ನೀಡಿದನೆಂದು ಪಾಳು ಬಸದಿಯ ಬಳಿಯಿರುವ ಶಾಸನವೊಂದು ತಿಳಿಸುತ್ತದೆ. ಈ ಜಿನಾಲಯಕ್ಕೆ ಮುಂದೆಯೂ ಅನೇಕ ದತ್ತಿಗಳು ದೊರೆತಿರುವುದನ್ನು ಅಲ್ಲಿಯೇ ದೊರೆತಿರುವ ಮತ್ತೊಂದು ಶಾಸನದಿಂದ ತಿಳಿಯುತ್ತದೆ. ಎರಡನೆಯ ಬಲ್ಲಾಳನ ಮಂತ್ರಿ ಮಾಚಿರಾಜ. ಈ ಮಾಚಿರಾಜನ ಮಾವ ಹೆಗ್ಗಡೆ ಬಲ್ಲಯ್ಯನು ಶ್ರೀಕರಣ ಜಿನಾಲಯದ ಶ್ರೀಪಾರ್ಶ್ವದೇವರ ಅಷ್ಟವಿಧಾರ್ಚನೆಗೆಂದು ಕಾಳಬೋವನಹಳ್ಳಿ ಮತ್ತು ಬೋಗವದಿಯಲ್ಲಿರುವ ಸಮಸ್ತ ಸುಂಕವನ್ನು ದಾನ ನೀಡಿರುವುದನ್ನು ತಿಳಿಸುತ್ತದೆ. ಈ ಮೇಲಿನ ಎರಡು ಶಾಸನಗಳಿಂದ ಶ್ರೀಕರಣದ ಪಾರ್ಶ್ವನಾಥ ಜಿನಾಲಯವು ಹೊಯ್ಸಳರ ಕಾಲದಲ್ಲಿ ಎಷ್ಟು ಪ್ರಸಿದ್ಧಿಯನ್ನು ಪಡೆದಿರುವ ಬಗೆಗೆ ವಿವರವನ್ನು ತಿಳಿಯುತ್ತದೆ. ಒಂದನೆಯ ನರಸಿಂಹ ಮತ್ತು ಎರಡನೆಯ ಬಲ್ಲಾಳನ ಕಾಲದಲ್ಲಿ ಅನೇಕ ದಾನ–ದತ್ತಿಗಳು ಈ ಜಿನಾಲಯಕ್ಕೆ ದೊರೆತಿದ್ದವು. ಈ ರೀತಿ ಪ್ರಸಿದ್ಧಿಯನ್ನು ಮಹತ್ವವನ್ನು ಪಡೆದಿದ್ದ ಜಿನಾಲಯ ಈಗ ಪಾಳುಬಿದ್ದ ಬಸದಿಯಾಗಿದೆ. ಸರಿಯಾದ ನಿರ್ವಹಣೆ ಇಲ್ಲದೇ ಜೈನಧರ್ಮದ ಇಳಿಮುಖದೊಂದಿಗೆ ಜಿನಾಲಯವು ತನ್ನ ವೈಭೋಗದ ಅಂತ್ಯವನ್ನು ಕಂಡಿದೆ. ಈ ಬಸದಿಯು ಮೂರು ಪಟ್ಟಿಕೆಗಳನ್ನು ಹೊಂದಿದ್ದು, ಭಿತ್ತಿಯ ಕಲ್ಲುಗಳೆಲ್ಲವೂ ದೇವಾಲಯದ ಸುತ್ತ ಪಾಳು ಬಿದ್ದಿವೆ. ನವರಂಗದಲ್ಲಿ ಘಂಟಾಕೃತಿಯ ನಾಲ್ಕು ಕಂಬಗಳಿದ್ದು, ತುಂಬಾ ಆಕರ್ಷಕವಾಗಿವೆ. ಇದು ಒಂಭತ್ತು ಅಂಕಣಗಳನ್ನು ಹೊಂದಿದೆ. ಗರ್ಭಗೃಹ, ಸುಖನಾಸಿ, ಮಂಟಪಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಮುಖಮಂಟಪದಲ್ಲಿ 16 ಕಂಬಗಳಿದ್ದು, ಇವುಗಳಲ್ಲಿ 12 ಕಂಬಗಳು ಸಿಲಿಂಡರಾಕಾರದಲ್ಲಿದ್ದು, ಗ್ರಾನೈಟ್‌ನಿಂದ ಮಾಡಿದ ಕಂಬಗಳಾಗಿವೆ. ಈ ಬಸದಿಯ ಪ್ರಮುಖ ಮೂರ್ತಿ ಸಂಪೂರ್ಣ ಹಾಳಾಗಿದ್ದು, ಪೀಠದೊಂದಿಗೆ ಕೇವಲ ಪಾದಗಳಷ್ಟೆ ಉಳಿದುಕೊಂಡಿವೆ. ಶಿಖರವು ಕುಸಿದು ಬಿದ್ದಿದೆ. ಮುಂದೆ ಸೇರ್ಪಡೆಯಾದ ಅರ್ಧ ಮಂಟಪವು ಶಿಥಿಲಾವಸ್ಥೆಯಲ್ಲಿದೆ. ಇದು ಹೊಯ್ಸಳರ ವಾಸ್ತು ಶೈಲಿಯ ಸರಳ ರಚನೆಯಾಗಿದೆ.

**ಕಸಲಗೆರೆ ಗ್ರಾಮದಲ್ಲಿನ ಪಾರ್ಶ್ವನಾಥ ಬಸದಿ (ಕಲ್ಲೇಶ್ವರ ದೇವಾಲಯ)ಯು ಇದೇ ಗ್ರಾಮದ** ಹೊರ ಭಾಗದಲ್ಲಿ ಕಲ್ಲೇಶ್ವರ ಗುಡಿಯಿದೆ. ಗುಡಿಯ ಮುಂದೆ ಕ್ರಿ.ಶ.1142ರ ಕಾಲಕ್ಕೆ ಸೇರಿದ ಜೈನ ಶಾಸನವಿದೆ. ಈ

ಶಾಸನದಲ್ಲಿ ವಿಷ್ಣುವರ್ಧನನ ಸಾಮಂತ ಸೋಮನು ಭಾನುಕೀರ್ತಿ ಸಿದ್ಧಾಂತ ದೇವರ ಶಿಷ್ಯನಾಗಿದ್ದ. ಈತನು ಕಲ್ಕುಣಿ ನಾಡಿನ ಹೆಬ್ಬದಿರುರೂವಾಡಿ ಎಂಬಲ್ಲಿ ಉತ್ತುಂಗವಾದ ಚೈತ್ಯಾಲಯವನ್ನು ಕಟ್ಟಿಸಿ ಅಲ್ಲಿ ಪಾರ್ಶ್ವನಾಥನ ಪ್ರತಿಷ್ಠಾಪನೆಯನ್ನು ಮಾಡಿ ಮೂಲಸಂಘ ಸೂರಸ್ತಗಣದ ಬ್ರಹ್ಮದೇವರ ಕಾಲನ್ನು ತೊಳೆದು, ದೇವರ ಅಂಗಭೋಗ, ಆಹಾರದಾನಕ್ಕೆ ಹಾಗೂ ಆ ಬಸದಿಯ ಜೀರ್ಣೋದ್ಧರವನ್ನು ಮಾಡಿಸಿ ಇದೇ ಗ್ರಾಮವನ್ನು ದತ್ತಿಯಾಗಿ ನೀಡಿದ್ದಾನೆ. ಆದರೆ, ಇಂದು ಆ ಭಾಗದಲ್ಲಿ ಎಲ್ಲಿಯೂ ಈ ಪಾರ್ಶ್ವನಾಥ ಬಸದಿ ಕಂಡುಬರುವುದಿಲ್ಲ. ಈ ಜೈನ ಶಾಸನವಿರುವ ಕಲ್ಲೇಶ್ವರ ಗುಡಿಯೇ ಹಿಂದೆ ಪಾರ್ಶ್ವನಾಥ ಬಸದಿಯಾಗಿರಬಹುದು. ಅನಂತರದಲ್ಲಿ ಆದ ಬದಲಾವಣೆಗಳಿಂದ ಕಂಬದಹಳ್ಳಿಯ ಶಾಂತಿನಾಥ ಬಸದಿಯನ್ನು ಎಕ್ಕೋಟಿ ಜಿನಾಲಯವೆಂದು ಕರೆದ ಹಾಗೆ, ಈ ಬಸದಿಯನ್ನು ಎಕ್ಕೋಟಿ ಜಿನಾಲಯವಾಗಿ ಮಾಡಲಾಗಿದೆ. ಇದೇ ಶಾಸನದಿಂದ ಪಾರ್ಶ್ವನಾಥ ಬಸದಿಯ ಪ್ರಧಾನಶಿಲ್ಪಿ ಮಾಚೋಜನೆಂದು ತಿಳಿಯುತ್ತದೆ. ಮುಂದೆ ಈ ಬಸದಿಗೆ ಅಪಾಯ ಒದಗಿದ ಸಂದರ್ಭದಲ್ಲಿ ಮಾಚೋಜನೇ ಅದನ್ನು ರಕ್ಷಿಸಿ ಎಕ್ಕೋಟಿ ಜಿನಾಲಯವೆಂದು ಘೋಷಿಸಿ ಈ ಶಾಸನವನ್ನು ಹಾಕಿಸಿರಬಹುದು. ಅನಂತರ ಸರಿಸುಮಾರು ಕ್ರಿ.ಶ.1190ರ ಹೊತ್ತಿಗೆ ಶಾಸನೋಕ್ತ ಕಲಿದೇವರ ಅಥವಾ ಕಲ್ಲೇಶ್ವರ ದೇವಾಲಯವಾಗಿರಬೇಕು ಎಂದು ಊಹಿಸಬಹುದು.

**ಹಟ್ಟಣದಲ್ಲಿನ ಪಾರ್ಶ್ವ ಜಿನಾಲಯ (ವೀರಭದ್ರ ದೇವಾಲಯ)ವು** ಇದೇ ದೇವಾಲಯದ ಬಳಿ ನಿಂತಿರುವ ಸರಿಸುಮಾರು ಕ್ರಿ.ಶ.1178ರ ಕಾಲಘಟ್ಟಕ್ಕೆ ಸೇರಿದ ಶಾಸನವನ್ನು ಹೊಯ್ಸಳರ ಎರಡನೆಯ ಬಲ್ಲಾಳನ ಸಾಮಂತ ನರಸಿಂಹನಾಯಕನ ಆಶ್ರಯದಲ್ಲಿದ್ದ ಸೋವಿಸೆಟ್ಟಿ ಎಂಬುವವನು ಹಾಕಿಸಿದ್ದಾನೆ. ಈತ ಮೂರು ಕೆರೆಗಳನ್ನು, ಪಾರ್ಶ್ವಜಿನಾಲಯವನ್ನು ಕಟ್ಟಿಸಿ ಈ ಜಿನ ಪಾರ್ಶ್ವದೇವರ ಅಷ್ಟವಿಧಾರ್ಚನೆಗೆ, ಜೀರ್ಣೋದ್ಧಾರಕ್ಕೆ, ಜಿನಮುನಿಗಳ ಆಹಾರಕ್ಕೆ ಎಂದು ಬಾಲಚಂದ್ರ ಮುನಿಗಳಿಗೆ ಭೂಮಿಯನ್ನು ದತ್ತಿಯಾಗಿ ನೀಡಿದ್ದಾನೆ. ಇದಲ್ಲದೆ ಮಹಾಪ್ರಧಾನ ಮಾಧವ ದಂಡನಾಯಕರ ಆದೇಶದಂತೆ ನಾರಣ ವೆರ್ಗ್ಗಡೆಯು ನಂದಾದೀವಿಗೆ ಮತ್ತು ಅಷ್ಟ ವಿಧಾರ್ಚನೆಗೆಂದು ಒಂದು ಗಾಣವನ್ನು ಮತ್ತು ಹೇರಿನ ಸುಂಕದ 10ನೆಯ ಒಂದರಷ್ಟನ್ನು ದಾನವಾಗಿ ನೀಡಿದ್ದಾನೆ ಎಂಬುದು ಉಲ್ಲೇಖಿತಗೊಂಡಿರುತ್ತದೆ.

ಸೋಮಿಸೆಟ್ಟಿಯು ತನ್ನ ಹೆಸರಿನಲ್ಲಿಯೇ ಸೋಮಿಶೆಟ್ಟಿ ಪಟ್ಟಣ ಎಂಬ ಊರನ್ನು ನಿರ್ಮಿಸಿ, ಅಲ್ಲಿ ಕೆರೆಗಳನ್ನು ನಿರ್ಮಿಸಿ ಜಿನ ದೇವಾಲಯವನ್ನು ಕಟ್ಟಿಸಿದ. ಈ ಸೋಮಿಶೆಟ್ಟಿ ಪಟ್ಟಣವೇ ಮುಂದೆ ಹಟ್ಟಣ ಎಂಬ ಹೆಸರು ಪಡೆದಿರಬೇಕು. ಪ್ರಸ್ತುತ ಊರಿನಲ್ಲಿ ಎಲ್ಲಿಯೂ ಪಾರ್ಶ್ವ ಜಿನಾಲಯ ಕಂಡುಬರುವುದಿಲ್ಲ. ಏಕೆಂದರೆ; ಈ ವೀರಭದ್ರಸ್ವಾಮಿ ದೇವಾಲಯವೇ ಪಾರ್ಶ್ವನಾಥ ಬಸದಿಯಾಗಿತ್ತು ಎಂದು ಆ ದೇವಾಲಯದ ವಾಸ್ತುಶಿಲ್ಪ ರಚನೆಯನ್ನು ನೋಡಿದರೆ ತಿಳಿಯುತ್ತದೆ. ಈ ಗುಡಿಯು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಇದು

ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣಗೊಂಡಿದ್ದು ಈಗ ಶಿಥಿಲವಾಗಿದೆ. ಗರ್ಭಗೃಹದಲ್ಲಿ ತೀರ್ಥಂಕರರ ಪೀಠದ ಮೇಲೆ ಸುಮಾರು 14–15ನೆಯ ಶತಮಾನಕ್ಕೆ ಸೇರಿದ ವೀರಭದ್ರನ ನಾಲ್ಕಡಿಯ ಶಿಲ್ಪವಿದೆ. ಅಂತರಾಳದಲ್ಲಿ ನಂದಿ ಇದೆ. ಇದು ಮೂಲತಃ ಶಾಸನೋಕ್ತವಾದ ಪಾರ್ಶ್ವನಾಥ ಜಿನಾಲಯವಾಗಿದ್ದು ತರುವಾಯ ಇದನ್ನು ವೀರಭದ್ರನ ಗುಡಿಯಾಗಿ ಪರಿವರ್ತಿಸಲಾಗಿದೆ. ಒಂದು ಕಾಲಘಟ್ಟದಲ್ಲಿ ಹೀಗೆ ಸಾಕಷ್ಟು ಜಿನಾಲಯಗಳು ಶೈವಗುಡಿಗಳಾಗಿ ಪರಿವರ್ತನೆಯಾಗಿರುವುದನ್ನು ಕಾಣುತ್ತೇವೆ.

**ಸುಕದರೆಯ ಬಸದಿ (ಲಕ್ಕಮ್ಮನ ಗುಡಿ)ಯು** ಇದೇ ಲಕ್ಕಮ್ಮನ ಗುಡಿಯ ಬಳಿ ಇದ್ದ ಒಂದು ಶಾಸನದಲ್ಲಿ ಹೊಯ್ಸಳರ ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ ಸುಕದರೆ ಎಂಬ ಗ್ರಾಮದಲ್ಲಿ ಜಕ್ಕಿಸೆಟ್ಟಿ ಎಂಬುವವನು ಒಂದು ಬಸದಿಯನ್ನು ಮತ್ತು ಆ ಊರಿನ ಆಗ್ನೇಯ ದಿಕ್ಕಿನಲ್ಲಿ ತನ್ನ ತಂದೆ–ತಾಯಿಯ ಹೆಸರಿನಲ್ಲಿ ಮಾಚ ಸಮುದ್ರ, ಮಾಕ ಸಮುದ್ರ ಎಂಬ ಕೆರೆಗಳನ್ನು ಕಟ್ಟಿಸಿದ್ದಾನೆ. ಆ ಬಸದಿಯಲ್ಲಿರುವ ಯತಿಗಳಿಗೆ, ಪೂಜೆಗೆ ಮತ್ತು ಆಹಾರಕ್ಕೆ ಎಂದು ದಾನವನ್ನು ನೀಡಿದ್ದಾನೆ. ಅಲ್ಲದೇ ತಿಪ್ಪೆ ಸುಂಕ ಮೊದಲಾದ ತೆರಿಗೆಗಳನ್ನು ಬಸದಿಗೆ ನೀಡಿದ್ದಾನೆ. ಆದರೆ ಇಂದು ಸುಕದರೆಯಲ್ಲಿ ಯಾವ ಬಸದಿಗಳು ಇಲ್ಲ. ಇತರ ಜಿನಾಲಯಗಳ ರೀತಿಯಲ್ಲಿ ಈ ಜಿನಾಲಯವೇ ಲಕ್ಕಮ್ಮನ ಗುಡಿಯಾಗಿರಬಹುದೇ ಎಂದು ನೋಡಲು ಇಂದು ಅಲ್ಲಿ ಲಕ್ಕಮ್ಮನ ಗುಡಿಯೂ ಇಲ್ಲ.

**ದಡಗ ಗ್ರಾಮದಲ್ಲಿನ ಪಂಚ ಬಸದಿಯು** ದಡಗ ಅಥವಾ ದಡಿಗ ಎಂದು ಕರೆಯುವ ಈ ಊರು ವೀರ ವೈಷ್ಣವೀ ತೀರದಲ್ಲಿದ್ದು, ಪ್ರಾಚೀನ ಕಾಲದಲ್ಲಿ ಪ್ರಸಿದ್ಧವಾಗಿದ್ದ ಊರಾಗಿತ್ತು. ಈ ಊರನ್ನು ಶಾಸನಗಳಲ್ಲಿ ದಡಿಗನಕೆರೆ, ದಿಂಡಿಗನಕೆರೆ ಎಂದೆಲ್ಲಾ ಕರೆಯಲಾಗಿದೆ. ಈ ಊರಿನ ಸಮೀಪ ವೀರ ವೈಷ್ಣವೀ ನದಿಗೆ ದೊಡ್ಡ ಕೆರೆಯನ್ನು ಕಟ್ಟಲಾಗಿದೆ. ಈ ಊರಿನಲ್ಲಿ ದೊರೆತಿರುವ ಹೊಯ್ಸಳರ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಶಾಸನವು ಈ ಊರಿನಲ್ಲಿ ಪಂಚ ಬಸದಿಗಳಿದ್ದವು ಎಂಬ ಮಾಹಿತಿಯನ್ನು ನೀಡುತ್ತದೆ. ಭೀಮಾರ್ಜುನ, ಲವಕುಶರಂತೆ ಹೆಸರಾದ ಮರಿಯಾನೆ ಮತ್ತು ಭರತಿಮಯ್ಯ ಸಹೋದರರು ಶ್ರೀಮೂಲಸಂಘ ಕುಂದ–ಕುಂದಾನ್ವಯ ಕಾಣೂರ್ಗ್ಗಣದ ತಿಂತ್ರಿಣಿಗಚ್ಛದ ಜವಳಿಗೆಯ ಮುನಿಭದ್ರ ಸಿದ್ಧಾಂತ ದೇವರ ಶಿಷ್ಯ ಮೇಘಚಂದ್ರ ಸಿದ್ಧಾಂತ ದೇವರಿಗೆ, ದಡಿಗನಕೆರೆಯ ಪಂಚಬಸದಿಗೆ ಬಾಹುಬಲಿ ಕೂಟವನ್ನು ದಾನವಾಗಿ ನೀಡಿದರು ಮತ್ತು ಮರಿಯಾನೆ ಸಮುದ್ರ ಎಂಬ ಕೆರೆಯ ಕೆಳಗಣ ಭೂಮಿಯನ್ನು ಅಡಿಕೆ ತೋಟವನ್ನು ದೇಶೀಯ ಗಣದ ನಾಲ್ಕು ಬಸದಿಗಳಿಗೆ, ಕಾಣೂರ್ಗ್ಗಣದ ಒಂದು ಬಸದಿಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಆದರೆ ಈ ಶಾಸನದಲ್ಲಿ ಉಲ್ಲೇಖಿಸಿರುವ ಪಂಚಬಸದಿ ಇಂದು ಈ ಊರಿನಲ್ಲಿ ಇಲ್ಲ. ಬದಲಿಗೆ ಒಂದು ಬಸದಿ ಇದೆ. ಇದನ್ನು ಶಾಂತಿನಾಥ ಬಸದಿ ಎಂದು ಕರೆಯುತ್ತಾರೆ. ಇದನ್ನು ಸುಮಾರು 70 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಇಲ್ಲಿ ಹಲವಾರು

ಜೈನ ಕುಟುಂಬಗಳಿವೆ. ಇಂದು ಆ ಪಂಚ ಬಸದಿಗಳು ಅಲ್ಲಿ ಇದ್ದವು ಎಂಬುದಕ್ಕೆ ಯಾವ ಆಧಾರಗಳು ದೊರೆಯುತ್ತಿಲ್ಲ. ಆ ಬಸದಿಗಳು ಸಹ ಇಂದು ಶಿಥಿಲಗೊಂಡು ನಾಶವಾಗಿವೆ.

**ಕೆಲಗೆರೆ ಗ್ರಾಮದಲ್ಲಿನ ತ್ರಿಕೂಟ ರತ್ನತ್ರಯ ಶಾಂತಿನಾಥ ಬಸದಿಯು** ಮೂರನೆಯ ನರಸಿಂಹನ ಕಾಲಕ್ಕೆ ಸೇರಿದ ಕೆಲಗೆರೆ ಶಾಸನವು ಮಾಘನಂದಿ ಸಿದ್ಧಾಂತ ಮುನಿಗಳಿಗೆ 3ನೆಯ ನರಸಿಂಹನು ಚಿಕ್ಕಕನ್ನೆಯನಹಳ್ಳಿ ಎಂಬ ಗ್ರಾಮವನ್ನು ತ್ರಿಕೂಟ ರತ್ನತ್ರಯವಾದ ಶಾಂತಿನಾಥ ಬಸದಿಗಾಗಿ ದಾನವಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ. ಆದರೆ ಕೆಳಗೆರೆಯಲ್ಲಿ ಈಗ ಯಾವ ಬಸದಿಯೂ ಕಂಡು ಬರುವುದಿಲ್ಲ. ಈ ಗ್ರಾಮದ ಸಮೀಪದಲ್ಲಿಯೇ ಚಿಕ್ಕನ್ನೆಯನಹಳ್ಳಿ ಗ್ರಾಮವಿದೆ. ಆದರೆ ಶಾಂತಿನಾಥ ಬಸದಿ ಎಲ್ಲಿತ್ತು ಎಂಬ ಬಗ್ಗೆ ಮಾಹಿತಿಯಿಲ್ಲ. ಕೆಲಗೆರೆಯ ತ್ರಿಕೂಟ ರತ್ನತ್ರಯ ಶಾಂತಿನಾಥ ಬಸದಿ, ಕಸಲಗೆರೆಯ ಪಾರ್ಶ್ವನಾಥ ಬಸದಿ, ಹಟ್ಟಣದ ಪಾರ್ಶ್ವ ಜಿನಾಲಯ, ದಡಗದ ಪಂಚಬಸದಿಗಳು, ಸುಕದರೆಯ ಬಸದಿ ಇವು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿವೆ. ಆದರೆ ಈ ಬಸದಿಗಳ ಕುರುಹು ನಮಗೆ ದೊರಕುವುದಿಲ್ಲ. ಆದರೆ ಅವು ಇದ್ದವು ಎಂಬುದಕ್ಕೆ ಅಲ್ಲಿ ದೊರೆತಿರುವ ಶಾಸನಗಳೇ ಸಾಕ್ಷಿ. ಈ ಬಸದಿಗಳೆಲ್ಲ ಸರಿಯಾದ ನಿರ್ವಹಣೆಯಿಲ್ಲದೆ ಅಥವಾ ಅನ್ಯಧರ್ಮದ ಹೊಡೆತಕ್ಕೆ ಸಿಕ್ಕಿ ಕಾಲಗರ್ಭದಲ್ಲಿ ಹೂತು ಹೋಗಿರಬಹುದು. ಹೀಗೆ, ನಾಗಮಂಗಲ ತಾಲೂಕು ಪ್ರದೇಶದಲ್ಲಿನ ಶಾಸನಗಳ ಹಿನ್ನೆಲೆಯಲ್ಲಿ ಜೈನ ಬಸದಿಗಳ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಸಮೀಕ್ಷೆ ಮಾಡಲಾಗಿದೆ.

**ಗ್ರಂಥಸೂಚಿ**


1. ಗೋಪಾಲ್. ಆರ್(ಸಂ–ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು.–2008
2. ಮಹದೇವ. ಸಿ (ಸಂ) – ನಾಗಮಂಗಲ, (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–7), ಪ್ರಸಾರಾಂಗ, ಕ.ವಿ.ವಿ, ಹಂಪಿ – 2011
3. ಅಪರ್ಣ ಕೂ.ಸ – ದೇವಾಲಯ ವಾಸ್ತು ಶಿಲ್ಪ ಪರಿಚಯ, ಹಂಪಿ – 1990
4. ಮಹಮ್ಮದ್ ಕಲೀಂ ಉಲ್ಲಾ – ನಾಗಮಂಗಲ ತಾಲೂಕು ದರ್ಶನ – 2003
5. ಅನಂತರಂಗಾಚಾರ್ಯ .ಎನ್ – ಕರ್ನಾಟಕ ವಾಸ್ತು ಶಿಲ್ಪ, ಮೈಸೂರು – 1992
6. ಅನಂತರಾಮು .ಕೆ – ಸಕ್ಕರೆ ಸೀಮೆ, ಮಂಡ್ಯ – 1982
7. ಚಿದಾನಂದಮೂರ್ತಿ.ಎಂ–ಕ.ಶಾ.ಸಾ.ಅ.,ಸಂ–1ಬೆಂಗಳೂರು – 2008
8. ಶ್ರೀಕಂಠ ಶಾಸ್ತ್ರಿ ಎಸ್. – ಹೊಯ್ಸಳ ವಾಸ್ತುಶಿಲ್ಪ, ಮೈಸೂರು – 1965
9. ಶ್ರೀನಿವಾಸನ್ ಪಿ.ಆರ್ – ದಕ್ಷಿಣ ಭಾರತದ ದೇವಾಲಯಗಳು, ಮೈಸೂರು – 1959